ಸಾಕ್ಷಿಯನ್ನು ದಿಃ **28.10.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಆರ್ ಎಸ್ ವಕೀಲರಿಂದಃ-**

ನಾನು ಈ ದಾವೆಯ ಪ್ರತಿವಾದಿಯ ವಿರುದ್ಧ ಹುಣಸೂರು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪಿ ಸಿ ಆರ್ 114/2024 ನ್ನು ದಾಖಲಿಸಿದ್ದೇನೆ ಎಂದರೆ ಸರಿ. ಸದರಿ ಖಾಸಗಿ ದೂರನ್ನು ಯಾವ ಕಾರಣಕ್ಕಾಗಿ ಪ್ರತಿವಾದಿಯ ವಿರುದ್ಧ ದಾಖಲಿಸಿದ್ದೀರಿ ಎಂದರೆ 3 ವರ್ಷಗಳ ಹಿಂದೆ ನಮ್ಮ ಬ್ಯಾಂಕಿನ ಲೆಕ್ಕ ಪರಿಶೋಧನೆ ನಡೆದಾಗ ಲೆಕ್ಕ ಪರಿಶೋಧಕರು ಘಟಕದ ಸ್ಥಳ ಪರಿಶೀಲನೆ ನಡೆಸಬೇಕಾಗಿತ್ತು ಅದಕ್ಕೆಂದು ಹೋದಾಗ ಜಾಗದಲ್ಲಿ ಯಾವುದೇ ಘಟಕ ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬರದೆ ಇದ್ದ ಕಾರಣ **forgery** ಮಾಡಿದ್ದಾರೆ ಎಂದು ಖಾಸಗಿ ದೂರನ್ನು ಸಲ್ಲಿಸಲಾಗಿದೆ. ಯಾವ ತಾರೀಖು, ತಿಂಗಳು ಮತ್ತು ಇಸವಿಯಲ್ಲಿ ಲಕ್ಕೆ ಪರಿಶೋಧನೆ ಹಾಗೂ ಸ್ಥಳ ತನಿಖೆಯನ್ನು ಮಾಡಿದ್ದೀರಿ ಎಂದರೆ ತಾರೀಖು ಮತ್ತು ತಿಂಗಳು ನೆನಪಿಲ್ಲ. 2022 ಡಿಸೆಂಬರ್ ರಲ್ಲಿ ಆಗಿದೆ.

ದಿನಾಂಕ 31.08.2020 ರಂದು ಪ್ರತಿವಾದಿಗೆ ರೂ.9,50,000/- ಸಾಲ ಮಂಜೂರಾಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಸಾಕ್ಷಿ ನಿಪಿ 2 ರ ದಾಖಲೆಯನ್ನು ತೋರಿಸಿ ಸಾಲ ಮಂಜೂರಾಗಿದೆ ದಾಖಲೆ ಎಂದು ನುಡಿಯುತ್ತಾರೆ. ನಿಪಿ 2 ರಲ್ಲಿ ಕಾಣಿಸಿದ ಹಣದ ಪೈಕಿ 9 ಲಕ್ಷ ಯಾರಿಂದ **Centering materials** ನ್ನು ಪ್ರತಿವಾದಿಯು ಖರೀದಿಸಿರುತ್ತಾರೆಯೋ ಅವರಿಗೆ ಪಾವತಿಯಾಗಿರುತ್ತದೆ. **PMEGP Scheme** ಅಡಿಯಲ್ಲಿ ಸಾಲವನ್ನು ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಲು ನೀಡಲಾಗುತ್ತದೆ. ಪ್ರತಿವಾದಿಗೆ ಸಾಲ ಮಂಜೂರು ಮಾಡುವ ಕಾಲಕ್ಕೆ ಮೇಲೆ ಹೇಳಿದ ಸ್ಕೀಮ್ ಅಡಿಯಲ್ಲಿ 9.9% ಬಡ್ಡಿಯನ್ನು ವಿಧಿಸುವ ನಿಯಮವಿತ್ತು. ಸಾಲ ಮರುಪಾವತಿಸದೆ ಎನ್ ಪಿ ಎ ಆದರೆ 2.5% ಬಡ್ಡಿಯನ್ನು ವಿಧಿಸಲಾಗುತ್ತದೆ. ಪ್ರತಿವಾದಿಯ ಸಾಲದ ಖಾತೆ 2021 ರಲ್ಲಿ ಎನ್ ಪಿ ಎ ಆಗಿದೆ. ಯಾವುದೇ ಸಾಲದ ಖಾತೆಯನ್ನು ಎನ್ ಪಿ ಎ ಅಡಿಯಲ್ಲಿ ತರಬೇಕಾದರೆ ಗ್ರಾಹಕರಿಗೆ 60 ದಿನ ಮುಂಚಿತ ನೋಟೀಸು ಕೊಡಬೇಕು ಎಂದರೆ ಸರಿಯಲ್ಲ. 2021 ರಲ್ಲಿ ಪ್ರತಿವಾದಿಯ ಖಾತೆ ಎನ್ ಪಿ ಎ ಆದಾಗ ನೋಟೀಸು ಕೊಟ್ಟಿದ್ದೀರಾ ಎಂದರೆ ಆಗಿನ ಮ್ಯಾನೇಜರ್ ಕೊಟ್ಟಿದ್ದಾರೆ. ಆ ರೀತಿ ನೋಟೀಸು ಕೊಡಲಾಗಿದೆ ಎನ್ನುವ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಎನ್ ಪಿ ಎ ಆದ ಬಾಬ್ತು ಪ್ರತಿವಾದಿಗೆ ಯಾವುದೇ ನೋಟೀಸು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿಯು ಸಾಲ ಪಡೆದುಕೊಂಡಾಗಿನಿಂದ ದಾವೆ ಹಾಕುವವರೆಗೆ ಸುಮಾರು 3 ಲಕ್ಷ ಹಣ ಕಟ್ಟಿದ್ದಾರೆ. ಪ್ರತಿವಾದಿ ಪಾವತಿಸಿದ 3 ಲಕ್ಷವನ್ನು ಕಡಿತ ಮಾಡಿದ್ದೇವೆ. 2021 ರಲ್ಲಿ ಪ್ರತಿವಾದಿ ಸುಸ್ಥಿದಾರರಾದರು. ಆಗ ಅವರಿಗೆ ನೋಟೀಸು ಕೊಟ್ಟಿರುತ್ತಾರೆ. ವಾದ ಪತ್ರದಲ್ಲಿ ಮಾಸಿಕ ಸಾಲದ ಕಂತು ಎಷ್ಟು ಎಂದು

ನಮೂದಿಸಿದ್ದೀರಾ ಎಂದರೆ ಇಲ್ಲ. ರೂ 3 ಲಕ್ಷ ಪಾವತಿಸಿದ್ದಾರೆ ಎಂಬ ಬಗ್ಗೆ ವಾದ ಪತ್ರದಲ್ಲಿ ಬರೆಸಲು ತೊಂದರೆ ಇರಲಿಲ್ಲ. 2021 ರಲ್ಲಿ ಪ್ರತಿವಾದಿ ಸುಸ್ಥಿದಾರರು ಆದ ಬಗ್ಗೆ ವಾದ ಪತ್ರದಲ್ಲಿ ನಮೂದಾಗಿದೆ. **PMEGP scheme subsidy scheme** ಎಂದರೆ ಸರಿ. ಪ್ರತಿವಾದಿಗೆ ಸಬ್ಸಿಡಿ ಉಪಯೋಗ ಹೇಗೆ ಕೊಟ್ಟಿದೀರಾ ಎಂದರೆ ಇನ್ನು ಹಣವನ್ನು ಅವರಿಗೆ ಪಾವತಿಸಿಲ್ಲ ಆದರೆ ಸದರಿ 3.5 ಲಕ್ಷವನ್ನು ಪ್ರತಿವಾದಿಯ ಸಾಲದ ಖಾತೆಗೆ ಠೇವಣಿಯಾಗಿ ಲಿಂಕ್ ಮಾಡಿದ್ದೇವೆ. ಪ್ರತಿವಾದಿಯ ಸಾಲದ ಖಾತೆಗೆ ಸಂ ಬಂಧಿಸಿದ ಅಕೌಂಟ್ ಸ್ಟೇಟ್ ಮೆಂಟ್ ಹಾಜರುಪಡಿಸಿದ್ದೇನೆ. ಸದರಿ ದಾಖಲೆಯಎಲ್ಲಿ ರೂ 3.5 ಲಕ್ಷ ಎಫ್ ಡಿ ಇಟ್ಟ ಬಗ್ಗೆ ನಮೂದಾಗಿದೆ ಎಂದರೆ ಇಲ್ಲ ಬೇರೆ ಇಟ್ಟಿದ್ದೇವೆ. ಯಾವ ಖಾತೆ ಎಂದರೆ ಎಫ್ ಡಿ ಖಾತೆ ಅದನ್ನು ಸಾಲದ ಖಾತೆಗೆ ಲಿಂಕ್ ಮಾಡುತ್ತೇವೆ. ಎಫ್ ಡಿ ಖಾತೆ ನಂಬರ್ ಈಗ ನೆನಪಿಲ್ಲ. ಯಾವುದಾದರೂ ಗ್ರಾಹಕನಿಗೆ ಸಾಲ ನೀಡಿದಾಗ ಎಷ್ಟು ಸಾಲದ ಖಾತೆ ತೆರೆಯುತ್ತೀರಿ ಎಂದರೆ ಎಷ್ಟಾದಾರು ತೆರೆಯಬಹುದು. ಸಾಕ್ಷಿ ಮುಂದುವರೆದ ಒಂದು ಸ್ಕೀಮ್ ಅಡಿಯಲ್ಲಿ ಒಂದು ಸಾಲದ ಖಾತೆ ತೆರೆಯುತ್ತೇವೆ ಎಂದು ನುಡಿಯುತ್ತಾರೆ. ಪ್ರತಿವಾದಿಗೆ ಎರಡು ಸ್ಕೀಮ್ ಅಡಿಯಲ್ಲಿ ಸಾಲ ಕೊಟ್ಟಿದ್ದೇವೆ.

ಕ್ಯಾಶ್ ಕ್ರೆಡಿಟ್ ಗೆ ಸಂಬಂಧಪಟ್ಟಂತೆ ಸಾಲದ ಖಾತೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಕ್ಯಾಶ್ ಕ್ರೆಡಿಟ್ ಅಡಿಯಲ್ಲಿ ರೂ 50 ಸಾವಿರ ಮಂಜೂರು ಮಾಡಿದ್ದೇವೆ. ಇನ್ನೊಂದು ರೂ 9 ಲಕ್ಷದ ಅವಧಿ ಸಾಲ ಆಗಿದೆ. ಪ್ರತಿವಾದಿಗೆ 2 ಸಾಲದ ಖಾತೆಯಲ್ಲಿ ಸಾಲ ಮಂಜೂರು ಮಾಡಲಾಗಿದೆ ಎಂದು ವಾದ ಪತ್ರದಲ್ಲಿ ಬರೆಯಲಾಗಿದೆ. ಕ್ಯಾಶ್ ಕ್ರೆಡಿಟ್ ಅಡಿಯಲ್ಲಿ ನೀಡಿದ ಸಾಲಕ್ಕೆ ಆ ಸಮಯದಲ್ಲಿ ಶೇಕಡ 9.9 ಬಡ್ಡಿಯಿತ್ತು. ಪ್ರತಿವಾದಿಯ ಸಾಲದ ಖಾತೆಗೆ ಸಂಬಂಧಿಸಿದಂತೆ ಅವಧಿ ಸಾಲದ ಬಾಬ್ತು ರೂ.9,31,215/- ಆಗಿದೆ. ಕ್ಯಾಶ್ ಕ್ರೆಡಿಟ್ ಸ್ಕೀಮ್ ಅಡಿಯಲ್ಲಿ ಎಷ್ಟು ಬಾಕಿ ಇದೆ ಎಂದರೆ ಅದನ್ನು ನಮೂದಿಸಿಲ್ಲ. ಸಾಕ್ಷಿಯು ಮುಂದುವರೆದು ರೂ 50 ಸಾವಿರ ಮತ್ತು ಬಡ್ಡಿ ಒಳಗೊಂಡಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಎರಡು ಖಾತೆ ಸೇರಿ ರೂ 10 ಲಕ್ಷ ಸಾಲ ಬಾಕಿ ಇದೆ. ಈ ದಾವೆಯನ್ನು ರೂ 9.5 ಲಕ್ಷಕ್ಕೆ ಸಲ್ಲಿಸಿದ್ದೇವೆ. ಸಾಕ್ಷಿಯು ಮುಂದುವರೆದು ಈಗಿನ ಬಡ್ಡಿ ಸೇರಿ ಅಷ್ಟಾಗಿದೆ ಎಂದು ನುಡಿಯುತ್ತಾರೆ.

ಪ್ರತಿವಾದಿಯ ಅವಧಿ ಸಾಲದ ಅಡಿಯಲ್ಲಿ ಸಬ್ಸಿಡಿ ಹಣವನ್ನು ಠೇವಣಿ ಇಟ್ಟಿದ್ದೇವೆ. ಯಾವ ದಿನಾಂಕದಂದು ಎಫ್ ಡಿ ಮಾಡಿದ್ದೀರಿ ಎಂದರೆ ದಾಖಲೆ ಹಾಜರುಪಡಿಸುತ್ತೇನೆ. ನಿಪಿ 13 ರ ದಾಖಲೆ ಪ್ರತಿವಾದಿಯ ಅವಧಿ ಸಾಲಕ್ಕೆ ಸಂಬಂಧಿಸಿದ್ದಾಗಿದೆ. ನಿಪಿ 13 ರಲ್ಲಿ ಎಫ್ ಡಿ ಇಟ್ಟ ಬಗ್ಗೆ ನಮೂದಾಗಿದೆ ಎಂದರೆ ಇಲ್ಲ. ಸದರಿ ಸಬ್ಸಿಡಿ ಹಣವನ್ನು ನಿಪಿ 13 ರಲ್ಲಿ ಕಾಣಿಸಲು ತೊಂದರೆ ಇದೆಯೇ ಎಂದರೆ ಆ ರೀತಿ ಮಾಡಲು ಬರುವುದಿಲ್ಲ. ಯಾವ ಕಾರಣಕ್ಕಾಗಿ ಆ ರೀತಿ ನಮೂದು ಮಾಡಲು ಬರುವುದಿಲ್ಲ ಎಂದರೆ **PMEGP scheme** ಅಡಿಯಲ್ಲಿ ಸಾಲ ಮಂಜೂರು ಮಾಡಿದರೆ ಸದರಿ ಸಾಲದ ಖಾತೆಯಲ್ಲಿ ವ್ಯವಹಾರ

ನಡೆಯುತ್ತಿರಬೇಕು ಹಾಗೂ **PMEGP** ಇಂದ ಸ್ಥಳ ತನಿಖೆ ಆಗಬೇಕು ಹಾಗೂ ಖಾತೆ ಎನ್ ಪಿ ಎ ಆಗಿರಬಾರದು. 2021 ರಲ್ಲಿ ನೋಟೀಸು ಕೊಟ್ಟಾಗ ಸಬ್ಸಿಡಿ ಹಣದ ಬಗ್ಗೆ ತಿಳಿಸಿದ್ದೀರಾ ಎಂದರೆ ತಿಳಿಸಿರುತ್ತಾರೆ. ವಾದ ಪತ್ರದಲ್ಲಿ ಸಬ್ಸಿಡಿ ಹಣದ ಬಗ್ಗೆ ಹೇಳಿದ್ದೀರಾ ಎಂದರೆ ಇಲ್ಲ. ಆ ರೀತಿ ಹೇಳಲು ತೊಂದರೆ ಇರಲಿಲ್ಲ. **PMEGP** ಅಡಿಯಲ್ಲಿ ಸಾಲ ನೀಡುವಾಗ ಕಡ್ಡಾಯವಾಗಿ ವಿಮೆ ಮಾಡಿಸಬೇಕೆಂದು ನಿಯಮ ಇದೆ. ಪ್ರತಿವಾದಿಗೆ ಸಂಬಂಧಿಸಿದಂತೆ ವಿಮೆ ಮಾಡಿಸಲಾಗಿದೆ. ಯಾವ ಯಾವ ಸಮಯದಲ್ಲಿ ವಿಮಾ ಹಣವನ್ನು ಪಡೆಯಬೇಕೆಂದು ನಮಗೆ ಮಾರ್ಗದರ್ಶನ ಇರುತ್ತದೆ. ಪ್ರಕೃತಿ ವಿಕೋಪ ನಡೆದಾಗ ಸದರಿ ವಿಮಾ ಹಣವನ್ನು ಪಡೆಯುವ ಸೌಲಭ್ಯ ಇದೆ.

ದಿನಾಂಕ 01.08.2023 ರಂದು ಪ್ರತಿವಾದಿಯ ವಿರುದ್ಧ ಹುಣಸೂರು ಪೊಲೀಸು ಉಪ ಅಧೀಕ್ಷಕರಿಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿ. ಸ್ಥಳ ತನಿಖೆಗೆ ಹೋದಾಗ ಮಹಜರು ಮಾಡಿರುತ್ತೀರಾ ಎಂದರೆ ನಮ್ಮ ಆಂತರಿಕ ಲೆಕ್ಕ ಪರಿಶೋಧಕರು ಮಾಡಿರುತ್ತಾರೆ. ಅದನ್ನು ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ನೋಡಿ ಹೇಳಬೇಕಾಗುತ್ತದೆ. ಸ್ಥಳ ತನಿಖೆಗೆ ಹೋದಾಗ ಗ್ರಾಹಕನಿಂದಲೂ ಹೇಳಿಕೆ ಪಡೆದುಕೊಳ್ಳುತೇವೆಯೇ ಎಂದರೆ ನಾವು ಹೋದಾಗ ಪ್ರತಿವಾದಿ ಅಲ್ಲಿ ಸಿಗಲಿಲ್ಲ. ಪ್ರತಿವಾದಿ ಸಿಗಲಿಲ್ಲ ಎಂಬ ಬಗ್ಗೆ ವರದಿ ಮಾಡಲಾಗಿದೆ. ಅದಕ್ಕೆ ಸಂಬಂಧಿಸಿದ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ನಾನು ಕೊಟ್ಟ ದೂರಿನ ಮೇರೆಗೆ ಪ್ರತಿವಾದಿಯನ್ನು ಠಾಣೆಗೆ ಕರೆಸಿ ಹೇಳಿಕೆ ಪಡೆದುಕೊಂಡ ಬಗ್ಗೆ ಗೊತ್ತಿಲ್ಲ. ನೀವು ನೀಡಿದ ದೂರು ಏನಾಯಿತು ಎಂದು ತಿಳಿದುಕೊಂಡಿದ್ದೀರಾ ಎಂದರೆ ನಾವು ದೂರು ಕೊಟ್ಟಾಗ ಸ್ವೀಕರಿಸಲಿಲ್ಲ ನಂತರ ನ್ಯಾಯಾಲಯಕ್ಕೆ ಪ್ರಕರಣ ದಾಖಲಿಸಿದ್ದೇವೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸೂಕ್ತ ಕಾರಣಗಳನ್ನು ನೀಡದೇ ಇರುವ ಕಾರಣ ಕೋರಿಕೆಯನ್ನು ತಳ್ಳಿ ಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.